13

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಮಿತಿ (RDPR)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 13/12/19

## ಮೂವರ ಅರೆಸ್ಟ್ | ಕೆರೆ ಪ್ರಾಧಿಕಾರದ ಎಇಗೆ ನಿರೀಕ್ಷಣಾ ಜಾಮೀನು

# ಕೆರೆ ಏರಿ ಒಡೆದವರ ಬಂಧನ

ವಿಜಯವಾಣಿ ಸುದ್ದಿಜಾಲ ಬೆಂಗಳೂರು 13/12/19

ಹುಳಿಮಾವು ಕೆರೆ ಏರಿ ಒಡೆದು ನೂರಾರು ಮನೆಗಳು ಜಲಾವೃತಗೊಳ್ಳಲು ಕಾರಣವಾಗಿದ್ದ ಮೂವರನ್ನು ಹುಳಿಮಾವು ಪೊಲೀಸರು ಕೊನೆಗೂ ಬಂಧಿಸಿದ್ದಾರೆ.

ಸಾರ್ವಜನಿಕ ಆಸ್ತಿಗೆ ಹಾನಿ ಮಾಡಿದ ಆರೋಪದಲ್ಲಿ ಕೆರೆ ಕಾವಲಿಗೆ ನೇಮಕವಾಗಿದ್ದ ಗೃಹರಕ್ಷಕ ಸಿಬ್ಬಂದಿ ಸಾಯಿನಾಥ್ ರೆಡ್ಡಿ ಮತ್ತು ನಾಗರಾಜ್ ಎಂಬುವರನ್ನು ಬಂಧಿಸಲಾಗಿದೆ. ಬಿಬಿಎಂಪಿ ಕೆರೆ ಪ್ರಾಧಿಕಾರದ ಸಹಾಯಕ ಇಂಜಿನಿಯರ್ ಶಿಲ್ಪಾ ಜಾಮೀನು ಪಡೆದು ಹೊರಬಂದಿದ್ದಾರೆ.

**» ಜೆಸಿಬಿ ಚಾಲಕ ಹೆಚ್ಚಿನ ಪ್ರಮಾಣದಲ್ಲಿ ಅಗೆದಿದ್ದರಿಂದ ಅವಘಡ**

ಘಟನೆ ಸಂದರ್ಭದಲ್ಲಿ ಕೆರೆ ಏರಿ ಒಡೆದಿರುವುದಕ್ಕೆ ಬಿಡಬ್ಲ್ಯುಎಸ್ಎಸ್‌ಬಿ ಇಂಜಿನಿಯರ್ ಕಾರ್ತಿಕ್ ನೇರ ಕಾರಣ ಎಂದು ಸ್ಥಳೀಯ ಪಾಲಿಕೆ ಸದಸ್ಯರು, ಶಾಸಕರು ಹಾಗೂ ಸಾರ್ವಜನಿಕರು ಆರೋಪ ಮಾಡಿದ್ದರು. ಆದರೆ, ಏರಿ ಒಡೆಯಲು ಗೃಹರಕ್ಷಕ ಸಿಬ್ಬಂದಿ ಕಾರಣವೆಂಬುದು ತನಿಖೆಯಲ್ಲಿ ದೃಢಪಟ್ಟಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕೆರೆ ಒತ್ತುವರಿ ತಡೆಯಲು ಇಬ್ಬರು ಗೃಹರಕ್ಷಕರನ್ನು ಬಿಬಿಎಂಪಿ ನೇಮಕ ಮಾಡಿತ್ತು. ಸಿಂಗಸಂದ್ರ ಭಾಗದಲ್ಲಿ ಇವರು ಕರ್ತವ್ಯ ನಿರ್ವಹಿಸುತ್ತಿದ್ದರು. ಕೆರೆಯ ಒಳಹರಿವು ಹೆಚ್ಚಾದಾಗ ಶಿಲ್ಪಾಗೆ ಸಾಯಿನಾಥ ರೆಡ್ಡಿ ಕರೆ ಮಾಡಿ ವಿಷಯ ತಿಳಿಸಿದ್ದ. ಈ ವೇಳೆ ಕೋಡಿ ಜಾಗದಲ್ಲಿ ನೀರನ್ನು ಬಿಡುವಂತೆ ಶಿಲ್ಪಾ ಸೂಚಿದ್ದರು ಎನ್ನಲಾಗಿದೆ. ಆ ಮೇರೆಗೆ ಗೃಹರಕ್ಷಕರು ಜೆಸಿಬಿ ಮೂಲಕ ನೀರು ಹರಿದು ಹೋಗುತ್ತಿದ್ದ ಜಾಗದಲ್ಲಿ ಕಾಮಗಾರಿ ಶುರು ಮಾಡಿದ್ದಾರೆ. ಈ ವೇಳೆ ಜೆಸಿಬಿ ಚಾಲಕ ಹೆಚ್ಚಿನ ಪ್ರಮಾಣದಲ್ಲಿ ಏರಿ ಒಡೆದಿದ್ದು ಅವಘಡಕ್ಕೆ ಕಾರಣವಾಗಿದೆ.

**ಜನರ ವಿರೋಧ:** ಹುಳಿಮಾವು ಕೆರೆ ದುರಂತ ಕೃತಕವಾಗಿದ್ದು, ಇದಕ್ಕೆ ಬಿಬಿಎಂಪಿ ನೇರ ಕಾರಣವಾಗಿದೆ. ಹೀಗಿದ್ದರೂ ಆರ್ಥಿಕ ಸಬಲರಿಗೆ ಪರಿಹಾರ ನೀಡುವುದಿಲ್ಲ ಎಂಬ ನಿಲುವಿಗೆ ಜನರ ವಿರೋಧ ವ್ಯಕ್ತವಾಗಿದೆ.



ಸಂಗ್ರಹ ಚಿತ್ರ

### ಕ್ರಮ ವಹಿಸದ ಬಿಬಿಎಂಪಿ

ಕೆರೆ ತುಂಬಿರುವ ಕುರಿತು ಗೃಹರಕ್ಷಕ ಸಿಬ್ಬಂದಿ ಮಾಹಿತಿ ನೀಡಿದರೂ ಸ್ಥಳಕ್ಕೆ ಭೇಟಿ ನೀಡದೆ ಕೆರೆ ಒಡೆಯಲು ಸೂಚಿಸುವ ಮೂಲಕ ದುರ್ಘಟನೆಗೆ ಕಾರಣವಾದ ಬಿಬಿಎಂಪಿ ಎಇ ಶಿಲ್ಪಾ ಅವರನ್ನು ಬಂಧಿಸಲಾಗಿದೆ. ಆದರೂ ಬಿಬಿಎಂಪಿ ವತಿಯಿಂದ ಶಿಲ್ಪಾ ಅವರನ್ನು ಅಮಾನತು ಮಾಡುವುದಾಗಲಿ ಅಥವಾ ಯಾವುದೇ ಕ್ರಮ ವಹಿಸಿರುವುದು ಅನುಮಾನಕ್ಕೆ ಕಾರಣವಾಗಿದೆ. ಹಲವು ಸಂಘಟನೆಗಳು ಕೂಡ ಶಿಲ್ಪಾ ಅವರ ಮೇಲೆ ಕ್ರಮ ಜರುಗಿಸುವಂತೆ ಒತ್ತಾಯಿಸುತ್ತಿವೆ.

### ಕರ್ತವ್ಯ ಮಾಡಿದ್ದೇ ತಪ್ಪಾ?

ನಮ್ಮ ತಂದೆ ಯಾವುದೇ ತಪ್ಪು ಮಾಡಿಲ್ಲ. ಮೇಲಿನ ಅಧಿಕಾರಿಗಳು ಹೇಳಿದ ಮಾತನ್ನು ಪಾಲಿಸುವುದು ಅವರ ಕರ್ತವ್ಯ. ಆದರೆ ಕರ್ತವ್ಯ ಮಾಡಿದ್ದೇ ತಪ್ಪು ಎಂಬಂತೆ ನಮ್ಮ ತಂದೆಯನ್ನು ಬಂಧಿಸಲಾಗಿದೆ. ಮನೆಗೆ ಆಸರೆಯಾಗಿದ್ದ ತಂದೆ ಬಂಧನದಲ್ಲಿರುವ ಕಾರಣ ಕುಟುಂಬ ಸಂಕಷ್ಟ ಎದುರಿಸುತ್ತಿದೆ. ತಪ್ಪು ಮಾಡಿದ ಇಂಜಿನಿಯರ್‌ಗೆ ಜಾಮೀನು ಸಿಕ್ಕಿದೆ ಎಂದು ವಿಜಯವಾಣಿ ಜತೆ ಮಾತನಾಡಿದ ಗೃಹ ರಕ್ಷಕ ಸಿಬ್ಬಂದಿ.ಸಾಯಿನಾಥರೆಡ್ಡಿ ಅವರ ಪುತ್ರ ಆಕ್ರೋಶ ವ್ಯಕ್ತಪಡಿಸಿದರು.

# ಸದನ ಸಮಿತಿ ಸದಸ್ಯರಿಂದ ಪರಿಶೀಲನೆ

**» ಶೀಘ್ರದಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಕೆ**

ಬೆಂಗಳೂರು: ಹುಳಿಮಾವು ಕೆರೆ ಹಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸದನ ಸಮಿತಿ ಸದಸ್ಯರು ಗುರುವಾರ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ.

ನಂತರ ವಿಜಯವಾಣಿ ಜತೆ ಮಾತನಾಡಿದ ಸಮಿತಿ ಸದಸ್ಯ ಆರಗ ಜ್ಞಾನೇಂದ್ರ, ಒಂದು ಎಕರೆಯಷ್ಟು ಕೆರೆ ಭೂಮಿಗೆ ಮಣ್ಣು ಮುಚ್ಚಿ ಮನೆಗಳನ್ನು ನಿರ್ಮಿಸಲಾಗಿದೆ. ಜತೆಗೆ ಇಲ್ಲಿಗೆ ಒಳಚರಂಡಿ ನೀರು ಸೇರುತ್ತಿದೆ. ಎಸ್‌ಟಿಪಿ ಘಟಕ ಸ್ಥಾಪಿಸಬೇಕಾದ ಇಲಾಖೆಗಳು ನಿರ್ಲಕ್ಷ್ಯ ವಹಿಸಿವೆ. ಒತ್ತುವರಿ ಮಾಡಿರುವುದು ಸಾಬೀತಾಗಿದ್ದು, ಅದನ್ನು ತೆರವುಗೊಳಿಸಲು ವರದಿಯಲ್ಲಿ ಸೂಚಿಸುತ್ತೇವೆ. ವಾರದಲ್ಲಿ ಸದನ ಸಮಿತಿಯಿಂದ ಸರ್ಕಾರಕ್ಕೆ ವರದಿ ಸಲ್ಲಿಸುತ್ತೇವೆ ಎಂದರು.

ವಿಧಾನ ಪರಿಷತ್ ಸದಸ್ಯ ಪ್ರಾಣೇಶ್, ಶಾಸಕ ಸಂಜೀವ್ ಮಠಂದೂರು ಮತ್ತಿತರರಿದ್ದರು.

**ಸರ್ಕಾರದ ಸಮಿತಿ ವರದಿಗೆ ವಿಳಂಬ:** ಹುಳಿಮಾವು ಕೆರೆ ಒಡೆದ ದುರಂತದ ಬಗ್ಗೆ ಪರಿಶೀಲಿಸಿ ವರದಿ ನೀಡಲು ರಾಜ್ಯ ಸರ್ಕಾರ ಡಿ. 4ರಂದು ಸಮಿತಿ ರಚಿಸಿದೆ.

ಐಐಎಸ್‌ಸಿ ನಿವೃತ್ತ ಪ್ರಾಧ್ಯಾಪಕ ಬಿ. ಆರ್. ಶ್ರೀನಿವಾಸಮೂರ್ತಿ, ತುಮಕೂರಿನ ಸ್ಮಾರ್ಟ್ ಸಿಟಿ ಇಂಜಿನಿಯರ್ ಶಾಂತರಾಜಣ್ಣ ಮತ್ತು ನಿವೃತ್ತ ಇಂಜಿನಿಯರ್ ಎಂ. ಎಲ್. ಮಾದಯ್ಯ ಸಮಿತಿಯಲ್ಲಿದ್ದಾರೆ. 10 ದಿನದಲ್ಲಿ ವರದಿ ನೀಡಲು ಸಾಧ್ಯವಿಲ್ಲ. ಇನ್ನಷ್ಟು ಕಾಲಾವಕಾಶ ಬೇಕೆಂದು ಸಮಿತಿ ಕೋರಿದೆ.